ನಗಸೂದು ಅಂತಲ್ಲ. ಒಂದೇ ವಸ್ತುವಿನ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸತ್ಯಗಳನ್ನ ಏಕಕಾಲಕ್ಕೆ ಬಿಂಬಿಸಲಿಕ್ಕೆ ಈ ವ್ಯಂಗ್ಯದ ಮಾಧ್ಯಮದ ಮೂಲಕ ಸಾಧ್ಯ ಅಂತ ನನಗ ಅನುಭವದ ಮೂಲಕ ಅನಿಸಿದ್ದು.

◆ **ಕನ್ನಡ ಭಾಷೆಯ ಅಳಿವು–ಉಳಿವು, ಕನ್ನಡ ಮಾಧ್ಯಮ, ಆಡಳಿತ ಭಾಷೆಯಾಗಿ ಕನ್ನಡ– ಇವುಗಳ ಬಗ್ಗೆ ಏನ್ ಹೇಳ್ತೀರಿ?**

ನಿಮ್ಮ ಈ ಎಲ್ಲಾ ಪ್ರಶ್ನೆಗಳಿಗೂ ಉತ್ರ ಅಂದ್ರ ನಾವು ಮಾಡಿದ ಗೋಕಾಕ್ ಚಳವಳಿ. ಕರ್ನಾಟಕದೊಳಗ ಕನ್ನಡದ ಅಳಿವು–ಉಳಿವಿನ ಬಗ್ಗೆ ಮಾತಾಡೂದಂದ್ರ ನಾವೆಲ್ಲಾರೂ ನಾಚಿಕಿ ಪಡಬೇಕು. ಅದನ್ನ ಉಳಸ್ಕೊಳ್ಳಾಕ ನಾವು ನಾಡಿನ ತುಂಬ ಹೋರಾಡ್ಬೇಕಾಗಿ ಬಂತಲ್ಲಾ, ಅದಕ್ಕಿಂತ ನಾಚಿಗ್ಗೇಡಿನ ಸಂಗ್ತಿ ಬ್ಯಾರೇ ಏನೈತಿ? ನಮ್ಮ ತಾಯಿಗೆ ತಾಯಿ ಅನ್ದ, ನಮ್ಮ ತಾಯಿನ್ನ ನಾವು ಸಂರಕ್ಷಣಾ ಮಾಡ್ದ, ಬ್ಯಾರೇ ಯಾರಾದ್ರೂ ಮಾಡಾಕ ಬರ್ತಾರಾ? ತಾಯಿನ್ನ ರಕ್ಷಣಾ ಮಾಡಬೇಕಾಗಿರೋ ಸ್ಥಿತಿ ಕರ್ನಾಟಕದೊಳಗ ಬಂದೈತೆಲ್ಲಾ!! ಅದಕ್ಕಿಂತ ಕೆಟ್ಟ ಏನೈತಿ? ನಮ್ಮ ರಾಜಕೀಯ ಎಷ್ಟ್ ಹದಗೆಟ್ಟೈತಿ ಅನ್ನೂದಕ್ಕ ಕನ್ನಡ ಭಾಷೆಗೆ ಬಂದಿರೋ ಈ ಗತೀನ ಸಾಕ್ಷಿ. ಇದರ ಬಗ್ಗೆ ಹೇಳಾಕ್ಹತ್ತಿದ್ರ ದಿನಗಟ್ಲೇ ಸಾಕಾಗುದುಲ್ಲ. ನಾನಂತೂ ತಯ್ಯಾರಾಗೇನಿ. 'ಕನ್ನಡ ಕನ್ನಡ ಬರ್‍ರಿ ನಮ್ಮ ಸಂಗಡ.'

◆ **ಏನರ ಸಂದೇಶಾ ಕೊಡ್ತೀರಿ ಸರ್?**

ಸಂದೇಶಾ ಕೋಡುವಷ್ಟ್ ಮಹಾತ್ಮ ನಾನಲ್ಲ. ಆದ್ರೂ ಹೇಳ್ತೇನಿ–

'ಪ್ರೀತಿ ಇಲ್ಲದೆ
ನಾನು ಏನನ್ನೂ ಮಾಡಲಾರೆ
ದ್ವೇಷವನ್ನೂ ಕೂಡ'

◆ **ಏನೂ ತಯ್ಯಾರಿ ಇಲ್ದs, ಎಲ್ಲಾ ತಯ್ಯಾರಿ ಮಾಡ್ಕೊಂಡವರಂಗ್ ಮಾತಾಡಿ ಕಾವ್ಯದ ಬಗ್ಗೆ, ನಾಟ್ಕದ ಬಗ್ಗೆ, ಕನ್ನಡ ಭಾಷೆಯ ಬಗ್ಗೆ ಭಾಳ ಗಟ್ಯಾದ ವಿಷಯಾ ತಿಳಿಸಿದ್ರಿ. ಧನ್ಯವಾದ. ನಿಮಗೂ ನಮಸ್ಕಾರ.**


**ಬಸವರಾಜ ಸಾದರ**

ಆಕಾಶವಾಣಿಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರು. 'ತಪ್ಪಂಡ' (ಕಥಾಸಂಕಲನ), 'ಸಿಸಿಫಸ್‌ರ ಸುತ್ತು', 'ಬುದ್ಧನ ಭಿಕ್ಷಾಪಾತ್ರೆ' (ಕವನ ಸಂಕಲನಗಳು), 'ಅನುಮಿತಿ' (ವಿಮರ್ಶೆ), 'ಮೃದುವಾಗಿ ಮುಟ್ಟು', 'ತಮಂಧಕ್ಕೆ ಬೆಳಗು', 'ಹೊಸ ಆಲೋಚನೆ' (ವೈಚಾರಿಕ ಪ್ರಬಂಧಗಳ ಸಂಗ್ರಹಗಳು) – ಅವರ ಕೆಲವು ಕೃತಿಗಳು. 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು' ಅವರ ಪಿಎಚ್.ಡಿ. ಪ್ರಬಂಧವಾಗಿದೆ.